ಇಲ್ಲಿಗೆ ನನ್ನನ್ನು ಒತ್ತಾಯಿಸಿ ಕರೆತಂದರು'' ಎಂದು ಪ್ರಶ್ನಾರ್ಥಕವಾಗಿ ತನ್ನ ಮೋರೆ ದಿಟ್ಟಿಸುತ್ತಿದ್ದ ತಾಯಿಗೆ ಶ್ಯಾಮ ವಿವರಿಸಿದ. ದೇವಕಿಯೀಗ, ತನ್ನನ್ನೇ ಅಪ್ಯಾಯತೆಯಿಂದ, ನೋಡುತ್ತಿದ್ದ ವಾಸುದೇವರ ಮೊಗವನ್ನೊಮ್ಮೆ ದಿಟ್ಟಿಸಿ ನೋಡಿದವಳು ತನ್ನ ಕಂಗಳನ್ನೇ ತಾನು ನಂಬದಂತಾದಳು. ವರುಷಗಳು ಎಷ್ಟು ಸರಿದು ಹೋದರೇನು? ವೇಷ ಹೇಗೆ ಇದ್ದರೂ ಉಸಿರಲ್ಲಿ ಉಸಿರು ಬೆರೆಸಿದ ಪ್ರೀತಿ ಪಾತ್ರ ಜೀವವನ್ನು ಮರೆಯಲು ಸಾಧ್ಯವೇ? ಹಳೆಯ ನೆನಪುಗಳುಕ್ಕಿ ಬರುತ್ತಿರುವಂತೆಯೇ ಆಕೆ, "ಮಗಾ... ಇವರು ತೋಟದಳ್ಳಿಯ ನಮ್ಮ ಒಡೆಯರು. ನಮ್ಮ ಪಾಲಿನ ದೇವರಂತವರು'' ಎಂದವಳೇ ಸೀದಾ ಬಂದು ಅವರ ಕಾಲಿಗೆರಗಿದಳು! ವಾಸುದೇವರ ಕಣ್ಣುಗಳಾಗಲೇ ಒದ್ದೆಯಾದವು!

"ಹೌದಾ ಅಮ್ಮ, ನಾನಿವರಿಗೊಂದು ಎಳನೀರು ತರ್ಲೇನೆ ಆಗದಾ?" ಎಂದ ಶ್ಯಾಮ ತಟ್ಟನೆ ಅಲ್ಲಿಂದ ಹೊರಗೆ ಹೊರಟು ಹೋದ. ಆತನ ಸಜ್ಜನಿಕೆ ಕಂಡು ವಾಸುದೇವರಿಗೆ ಹೆಮ್ಮೆ ಅನಿಸಿತು. "ಇದೆಂಥಹ ವಿಚಿತ್ರ ಅಯ್ಯ? ನಿಮ್ಮನ್ನು ಇಲ್ಲಿ ಕಾಣುತ್ತೇನೆಂದು ಕನಸಲ್ಲಿಯೂ ಎಣಿಸಿರಲಿಲ್ಲ ನಾನು! ಯಾವ ಕಾಲವಾಯಿತು ಊರು ಬಿಟ್ಟು! ಅಲ್ಲಿಂದ ಹೊರಡುವಾಗ ಇವನನ್ನು ಹೊಟ್ಟೆಯಲ್ಲಿ ಹೊತ್ತಿದ್ದೆ. ಎಲ್ಲಿಗೆಂದು ಗೊತ್ತಿಲ್ಲದೆ ಬಸ್ಸನ್ನು ಹತ್ತಿದೆವು... ಯಾರನ್ನೂ ದೂರಲಿಕ್ಕಿಲ್ಲ... ನಿಮಗೆ ಒಳ್ಳೆಯದಾಗಲೆಂದು ಎಲ್ಲಾ ಸಂಕಷ್ಟಗಳನ್ನು ತಾಳಿಕೊಂಡು ಹೀಗೆ ಮಾಡಿದೆವು... ಪಟ್ಟ ಕಷ್ಟಗಳಿಗಂತೂ ಲೆಕ್ಕವೇ ಇಲ್ಲಾ. ದಿನವೂ ನಿಮ್ಮನ್ನು ನೆನಪಿಸಿಕೊಳ್ಳುತ್ತಿದ್ದೆವು... ಕೆಲವರ್ಷಗಳ ಹಿಂದೆ ಇವರೂ ತೀರಿಕೊಂಡರು. ಹೇಗೋ ನಾವಿಬ್ಬರು ಬದುಕು ತಳ್ಳುತ್ತಾ ಇಲ್ಲಿ ತನಕ ಬಂದೆವು..." ಗದ್ಗದಿತಳಾಗಿ ಇಷ್ಟು ಹೇಳಿದ ದೇವಿ ಮಾತು ನಿಲ್ಲಿಸಿದಳು. ಮತ್ತೇನೋ ನೆನಪಿಸಿಕೊಂಡು "ನಿಮ್ಮ ಅಮ್ಮ?" ಎಂದು ಕಣ್ಣೀರಾದಳು.

ವಾಸುದೇವರೀಗ ಆಕೆಯ ತಲೆ ನೇವರಿಸುತ್ತಾ, ದುಃಖ ಶಮನವಾಗುವ ತನಕ ಸುಮ್ಮನುಳಿದರು. ನಂತರ, ಆಕೆಯನ್ನುದ್ದೇಶಿಸಿ, "ದೇವೀ, ನಾನೀಗ ನಿನ್ನಲ್ಲೊಂದು ಮಾತು ಹೇಳಲು ಬಂದಿದ್ದೇನೆ. ನಮ್ಮಮ್ಮ ತೀರಿಕೊಂಡು ವರ್ಷಗಳೇ ಕಳೆದಿವೆ... ಅಂದು ನೀನೇನೋ ನನಗೊಂದು ಮಾತೂ ಹೇಳದೆ ಹೊರಟುಬಂದೆ. ನಾನು ಮಾತ್ರ ನಿನ್ನ ನೆನಪಲ್ಲಿ ಒಂಟಿಯಾಗಿ ಬದುಕುತ್ತಿದ್ದೇನೆ, ನನಗೂ ಈ ಜನ್ಮದಲ್ಲಿ ನಿನ್ನನ್ನು ಮತ್ತೊಮ್ಮೆ ಕಾಣುತ್ತೇನೆನ್ನುವ ಭರವಸೆ ಇರಲಿಲ್ಲ... ಅದೇನು ಋಣವೋ, ಯಾವ ಶಕ್ತಿಯೋ ನನ್ನನ್ನಿಲ್ಲಿಗೆ ಎಳೆದು ತಂದಿತು! ನನ್ನ ಕೊನೆಗಾಲದಲ್ಲಾದರೂ ನನ್ನೊಂದಿಗೆ ಇದ್ದುಬಿಡು, ನೀವಿಬ್ಬರೂ ನನ್ನ ಜೊತೆಗೆ ತೋಟದಳ್ಳಿಗೆ ಬಂದುಬಿಡಿ... 'ಆಗವುದಿಲ್ಲ' ಎನ್ನಬೇಡಾ" ಎಂದು ನೇರವಾಗಿ ಹೇಳಿದರು!

"ಕೊನೆಗಾಲ ಎಂದೆಲ್ಲಾ ಹೇಳಬೇಡಿ ಒಡೆಯಾ... ನಾನು ಜೀವವಿರುವ ತನಕ ನಿಮಗೇನೂ ಆಗದಿರಲಿ... ನನ್ನ ಜೀವಕ್ಕೆ ಬೆಳಕು ಕೊಟ್ಟವರು ನೀವು. ಇಲ್ಲಿತನಕ ಬಂದು ಕೇಳಿಕೊಂಡ ನಿಮ್ಮ ಮಾತನ್ನು ಖಂಡಿತಾ ಮೀರಲಾರೆ. ಇಲ್ಲಿ ನಮ್ಮದೆನ್ನುವುದು ಏನೂ ಇಲ್ಲ. ಆದ್ರೆ ಶ್ಯಾಮನನ್ನು ಒಪ್ಪಿಸಿ ಇಲ್ಲಿಂದ ಹೊರಡಲು ನನಗೊಂದಿಷ್ಟು ದಿನಗಳ ಸಮಯ ಕೊಡಿ. ನೀವು ಒಂಟಿಯಾಗಿಯೇ ಉಳಿದುದು ನನಗೆ ಗೊತ್ತಿರಲಿಲ್ಲ ಒಡೆಯಾ..." ಎಂದಳು ದೈನ್ಯದಿಂದ.

"ಆಯ್ತು ದೇವಿ... ನೆನಪಿರಲಿ. ನಿಮಗಾಗಿ ನಾನಲ್ಲಿ ಕಾಯುತ್ತಿರುತ್ತೇನೆ" ಎಂದು ವಾಸುದೇವರು ಮಾತು ಮುಗಿಸುವ ಮುನ್ನ ಎಳನೀರಿನೊಂದಿಗೆ ಶ್ಯಾಮ ಒಳಗೆ ಬಂದ. "ಶ್ಯಾಮಾ, ಅಮ್ಮನಲ್ಲಿ ಎಲ್ಲಾ ವಿಚಾರ ಹೇಳಿದ್ದೇನೆ. ಆದಷ್ಟು ಬೇಗ ನೀವಿಬ್ಬರು ತೋಟದಳ್ಳಿಗೆ ಬಂದುಬಿಡಿ" ಎಂದು ಆತನಲ್ಲೂ ಅವರು ಹೇಳಿದರು. ಅಚ್ಚರಿಗೊಳಗಾದವನಂತೆ ಶ್ಯಾಮ